Inspectors, Para Medical Workers, Malaria Survey Workers, Typists, etc.—in all about hundreds of appointments. Certain complaints have been brought to my notice also. This committee was constituted not by this Government but at the time of the Governor's *rule*. I feel that a purely official committee would be desirable in view of the complaints that have been received. Therefore, I will pass orders for cancelling this committee and constituting a purely official committee consisting of the Director of Health Services as the Chairman and one or two officers and will ask the present committee to discontinue their work.

CLARIFICATION WITH REGARD TO EXPENDITURE ON VISIT OF OFFICERS TO U.S.A.

Yesterday, with regard to the interpellation of Sri Bangarappa I gave certain answers which require some clarification. It may please be noted that the entire expenditure on this project is borne by the Government of India and no portion of it is debitable to the State Government. The State Government is an agency for the Government of India in the implementation of this project. The Government of India in turn are financed by the World Bank with a loan of Rs. 7.34 crores and an outright grant of Rs. 3.76 crores by the Kingdom of Sweeden. As far as the loan is concerned, it is repayable over a period of 50 years with another 15 years' grace period and interest is charged at three-fourth per cent which is known as service charge. The question of repayment of the loan will be taken care of by the Government of India and the State Government has nothing to do with it. Arising out of this we will be having in this area about 694 new hospitals called sub-centres.

ಶ್ರೀ ಕೋಣಂದೂರು ಲಿಂಗಪ್ಪ.—8 ದಿವಸಗಳಾಯಿತು, ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿ ಇನ್ನೂ ಉತ್ತರವಿಲ್ಲ. ಒಂದು ತಿಂಗಳ ಹಿಂದೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ, ಅದಕ್ಕೂ ಉತ್ತರವಿಲ್ಲ. ಈ ರೀತಿಯನ್ನು ನೋಡಿದರೆ ಸರ್ಕಾರ ಎಷ್ಟು ವೇಗವಾಗಿ ಹೋಗುತ್ತದೆ ಎಂದು ವಿಷಾದ ವ್ಯಕ್ತಪಡಿಸ ಬೇಕಾಗುತ್ತದೆ. ತಮಗೆ ಹೇಳುತ್ತೇನೆ ಅದಷ್ಟು ಬೇಗ ಉತ್ತರ ಕೊಡಿಸ ಬೇಕು.

ಅಧ್ಯಕ್ಷರು.— ಆಗಲಿ.

PROTECTION TO THE MEMBERS

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ನಾನು ಹೇಳುತ್ತಿರುವುದು ನಮ್ಮ ಜೀವಮಾನದ ಪ್ರಶ್ನೆ. ಪತ್ರಿಕೆಯಲ್ಲಿ ಬಂದಿದೆ ನಮ್ಮನ್ನು ಖೂನಿ ಮಾಡುವುದಕ್ಕೆ ಹೊರಟಿದ್ದಾರೆ, ನಮ್ಮ ಕ್ಷೇತ್ರದಲ್ಲಿ ನಾವು ಬದುಕುವುದು ಕಷ್ಟವಾಗಿದೆ. ನಮ್ಮ ರೂಮಿಗೆ ನುಗ್ಗುತ್ತಾರೆ, ಹೊಡೆಯುವುದಕ್ಕೆ ಬರುತ್ತಾರೆ. ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಹೀಗಾದರೆ ಹೇಗೆ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ?

ಅಧ್ಯಕ್ಷರು.—ಅಷ್ಟು ಲಘುವಾಗಿ ಮಾತನಾಡಬಾರದು. ಹಾಗೆ ಬಂದರೆ ಕೂಡಲೇ ಕಂಪ್ಲೆಂಟ್ ಕಳುಹಿಸಬೇಕು. ಇಪ್ಪತ್ತರವರೆಗೆ ಕಂಪ್ಲೇಂಟ್ ಬಂದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಂಪ್ಲೇಟ್ ಕಳುಹಿಸುವುದಕ್ಕೆ ಅಷ್ಟು ಪುರಸತ್ತು ಇರುತ್ತದೆಯೇ!

ಅಧ್ಯಕ್ಷರು.—ಇಲ್ಲಿ ಬಂದು ಹೇಳುವುದಕ್ಕೆ ಪುರಸತ್ತು ಇದೆಯೇ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಪೋಲೀಸರಿಗೆ ಒಂದು ನಿರ್ದಿಷ್ಟವಾದ ತಿಳುವಳಿಕೆ ಸರ್ಕಾರ ಕೊಟ್ಟಹಾಗೆ ಕಾಣುತ್ತದೆ. ಆಡಳಿತ ಕಾಂಗ್ರೆಸ್ ಬಿಟ್ಟು ಬೇರೆ ಯಾರಾದರು ಆದರೆ ವಿಚಾರಿಸಿಕೊಳ್ಳಿ ಎಂದು ಹೇಳಿದ ಹಾಗೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಸಂದರ್ಭ ಗೊತ್ತಾಗಲಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮ ಕ್ಷೇತ್ರದಲ್ಲಿ ಗೊತ್ತಾಗುವುದಿಲ್ಲ. ಇದರ ಬಗ್ಗೆ ನಿರ್ದಿಷ್ಟವಾಗಿ ಮುಖ್ಯಮಂತ್ರಿಗಳನ್ನು ಕರೆಸಿ ಕೇಳಿ. ವಿರೋಧಪಕ್ಷದ ನಡವಳಿಕೆಯನ್ನು ಹೊಡೆಯುವುದು. ಬಡಿಯುವುದು, ಜೀಪಿಗೆ ಬೆಂಕಿ ಹಚ್ಚುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಯಾವಾಗ ಹಚ್ಚಿದರು ?

ಶ್ರೀ ಎಚ್. ಎಸ್. ಸಿದ್ದಪ್ಪ.—ಶ್ರೀಮಾನ್ ಹನುಮೇಗೌಡರ ಜೀಪಿಗೆ ಹಾಸನದಲ್ಲಿ ಯಾವುದೊ ಸಮಾರಂಭಕ್ಕೆ ಹೋದಾಗ

ಅಧ್ಯಕ್ಷರು.—ಮನಸ್ಸಿನಲ್ಲಿ ಏನೋ ನೆನೆಸಿಕೊಂಡು ಬಂದುಬಿಡುತ್ತೀರಿ. ಹೇಳುವಾಗ ಎಲ್ಲರಿಗೂ ಗೊತ್ತಾಗಿದೆ ಎಂದು ತಿಳಿದುಕೊಂಡು ಮಾತನಾಡುವ ಹಾಗೆ ಹೇಳುತ್ತೀರಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಪತ್ರಿಕೆಯಲ್ಲಿ ಬಂದಿರುವ ವಿಷಯ, ಎಲ್ಲರಿಗೂ ಗೊತ್ತಿಲ್ಲದೆ ಹೋದರೂ ಶ್ರೀ ಸಿದ್ದವೀರಪ್ಪನವರಿಗೆ ಮತ್ತು ಚೆನ್ನಬಸಪ್ಪನವರಿಗೂ ಗೊತ್ತಿರುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಇವರೊಳಗೆ ಸೇರಿದ್ದೇವೇನೇ ? ಹೇಗೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಪರಿಸ್ಥಿತಿ ಹೀಗಾದರೆ ಕಷ್ಟವಾಗುತ್ತದೆ. ನಿಮ್ಮ ಮನೆಯಲ್ಲಿ ನಮಗೆ ಒಂದು ಔಟ್ ಹೌಸ್ ಕೊಡಿ ಅಲ್ಲೇ ನಾವು ಇರುತ್ತೇವೆ. ಊರಿಗೆ ಹೋಗುವುದಿಲ್ಲ. ನಮ್ಮನ್ನು ಹೊಡಿಸದ ಹಾಗೆ ಬಡಿಸದ ಹಾಗೆ ಸರಿಯಾದ ವ್ಯವಸ್ಥೆ ಮಾಡಿಕೊಡಿ.

FACILITIES AT THE GENERAL HOSPITAL, ETC., AT BANGALORE.

ಶ್ರೀ ಕೋಣಂದೂರು ಲಿಂಗಪ್ಪ.—ಶಾಸನಕರ ಸಂಬಂಧದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಶ್ರೀಮಾನ್ ಚೆನ್ನಬಸಪ್ಪನವರು ಇದ್ದಾರೆ. ಜನರಲ್ ಹಾಸ್ಪಿಟಲ್‌ನಲ್ಲಿ ಇರುವವರಿಗೆ ಅಲ್ಲಿಗೆ ಬೇಕಾದ ಸರಿಯಾದ ವ್ಯವಸ್ಥೆಮಾಡಿ. ಅಲ್ಲಿನ ಊಟದ ವ್ಯವಸ್ಥೆಯನ್ನು ಮಂತ್ರಿಗಳು ಬಂದು ಊಟಮಾಡಿ ನೋಡಿ. ಇದರ ಬಗ್ಗೆ ನಾನು ತಮಗೆ ಬರೆದುಕೊಟ್ಟಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ನಾವು ಊಟ ಮಾಡುವ ಹಾಗಿಲ್ಲ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಜನರಲ್ ಹಾಸ್ಪಿಟಲ್ ಅನಾಥಾಶ್ರಮವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಊಟ ಇದ್ದರೂ ಕೂಡ ಸಾಂಬಾರು ಅಲ್ಲಿ ತಿನ್ನುವುದಕ್ಕೆ ಆಗುವುದಿಲ್ಲ. ಅದಕ್ಕೆ ನೋಡಿ ಹಾಕಿರುತ್ತಾರೆ. ಅದು ತಿನ್ನುವುದಕ್ಕೆ ಆಗುವುದಿಲ್ಲ. ಆದ್ದರಿಂದ ಊಟಕ್ಕೆ ಬೇರೆ ಕಡೆ ಹೋಗಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಶಾಸನ ಸಭೆ ನಡೆಯುತಿದ್ದಾಗ ಶಾಸಕರು ಬಂದರೆ ಫೋನು ಮಾಡಿದರೆ ಅಲ್ಲಿ ನಾಲ್ಕು ಆಣೆ ಚಾರ್ಜು ಮಾಡುತ್ತಾರೆ. ರಿಜಿಸ್ಟ್ರೇಚರ್ ಹೋಂ ನಲ್ಲಿ ಫೋನು ಚಾರ್ಜು ಮಾಡುವುದಿಲ್ಲ. ಅದರ ಬಗ್ಗೆ ಶೀಘ್ರವಾಗಿ ಒಂದು ನಿರ್ಧಾರಕ್ಕೆ ಬಂದು ಜನರಲ್ ಹಾಸ್ಪಿಟಲ್‌ನ್ನು ರಿಜಿಸ್ಟ್ರೇಚರ್‌ಗೆ ಕೊಡಿ. ಬೇಕಾದರೆ ನೀವು ಬಂದು ನೋಡಿ, ಅಲ್ಲಿ ಊಟಮಾಡಿ ನಾವು ಚಾರ್ಜು ಕೊಡುತ್ತೇವೆ.